ಸರಿಯಲ್ಲ. ಕೆ.ಎಸ.ಎಫ.ಸಿ ಸಾಲವನ್ನು ಮಾಡುವಾಗ ಅಡಮಾನವಾಗಿ ಮಂಜುನಾಥ ಇಂಡಸಿ್ಟಯನ್ನು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಜಮೀನನ್ನು ಅಡಮಾನವಾಗಿ ಇಟ್ಟಿದ್ದೇವೆ. ಮಂಜುನಾಥ ಇಂಡಸಿ್ಟಸ್ ರವರು ಹಲವು ಕಂತುಗಳನ್ನು ಸಾಲದ ಮರುಪಾವತಿ ನೀಡಿದ್ದೆ. ಮಂಜುನಾಥ ಇಂಡಸಿ್ಟಸ್ ರವರು 1998 ರಿಂದ ಸಾಲ ಮರುಪಾವತಿ ನೀಡುವುದನ್ನು ನಿಲ್ಲಿಸಿರುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ದಿಃ-07.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಎದುರುದಾರರ ಪರ ಶ್ರೀ. ವಿ.ಎಸ್.ವಿ ವಕೀಲರಿಂದ ಃ**

20. ಮಂಜುನಾಥ ಇಂಡಸ್ಟ್ರಿಯಲ್ ಎಸ್ಟೇಟ್ ನನಗೆ ಗೊತ್ತಿದೆ. ಅದರಲ್ಲಿ ನನ್ನ ಗಂಡ ಹೇಮಚಂದ್ರರವರು ಪ್ರೆಪ್ರೈಟರ್ ಆಗಿದ್ದರು. ನನ್ನ ಗಂಡನನ್ನು ಬಿಟ್ಟು ಉಳಿದವರು ಎಂದರೆ ನರಸಪ್ಪ ರೆಡ್ಡಿ ಮತ್ತು ನಾಗರಾಜುರವರು ಬೇರೆ ಏನು ಕೆಲಸ ಆ ಇಂಡಸ್ಟ್ರಿಯಲ್ಲಿ ಮಾಡುತ್ತಿರಲಿಲ್ಲ.

21. 1997 ರಲ್ಲಿ ಮಂಜುನಾಥ ಇಂಡಸ್ಟ್ರಿಯು ನಷ್ಟದಲ್ಲಿತ್ತು ಎಂದರೆ ಸರಿ. 1998 ರಿಂದ 2002 ರವರೆಗೆ 1 ರಿಂದ 3 ನೇ ಎದುರುದಾರರು ಸಾಲದ ಹಣವನ್ನು ಕಂತಿನ ರೂಪದಲ್ಲಿ ಕಟ್ಟಿರುತ್ತಾರೆ. ಸಾಕ್ಷಿ ಮುಂದುವರಿದು ನಮಗೆ ಬಾಡಿಗೆ ಕೊಡಬೇಕಾದ ಹಣವನ್ನು ಮುರಿದು ಅಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 2002 ರವರೆಗೆ ಪ್ರತಿವಾದಿಗಳು ಸಾಲದ ಬಡ್ಡಿ ಹಣವನ್ನು ಕಟ್ಟಿರುತ್ತಾರೆ ಮತ್ತು 2002 ರಲ್ಲಿ ಅಸಲು ಮೊತ್ತವನ್ನು ಕಟ್ಟಿರುತ್ತಾರೆ ಎಂದರೆ ಸರಿ.

22. ನಿ.ಪಿ.2 ರಲ್ಲಿ ನನ್ನ ಗಂಡನ ಸಹಿ ಇರುತ್ತದೆ. ಉಳಿದವರ ಸಹಿಯನ್ನು ನಾನು ಗುರುತಿಸಲಾಗುವುದಿಲ್ಲ. ನಾಗರಾಜು, ವಿವೇಕ ರೆಡ್ಡಿ ಮತ್ತು ಜಯಲಕ್ಷ್ಮಿಯವರು ವಿದ್ಯಾವಂತರು ಎಂದರೆ ವಿವೇಕ ರೆಡ್ಡಿ ಮಾತ್ರ ವಿದ್ಯಾವಂತರು ಎಂದು ನುಡಿಯುತ್ತಾರೆ. ನಾಗರಾಜು ಮತ್ತು ಜಯಲಕ್ಷ್ಮಿಯವರಿಗೆ ಓದಲು ಬರೆಯಲು ಬರುತ್ತದೆ ಎಂದರೆ ಅವರಿಗೆ ಕನ್ನಡ ಮಾತ್ರ ಬರುತ್ತದೆ ಆಂಗ್ಲ ಭಾಷೆ ಬರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.2 ಕ್ಕೆ ನಾಗರಾಜು ಮತ್ತು ಜಯಲಕ್ಷ್ಮಿಯವರಿಗೆ ಅವರ ವಕೀಲರು ಓದಿ ಹೇಳಿ ಎಲ್ಲಿ ಸಹಿ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.2 ಕ್ಕೆ ನನ್ನ ಗಂಡನ ಸಹಿಯನ್ನು ನ್ಯಾಯಾಲಯದ ಕಾರಿಡಾರಿನಲ್ಲಿ ತೆಗೆದುಕೊಂಡಿರುತ್ತಾರೆ. ಕಾರಿಡಾರಿನಲ್ಲಿ ಸಹಿ ಮಾಡಿದ್ದಾರೆ ಎಂದು ನಾನು ನ್ಯಾಯಾಲಯದಲ್ಲಿ ಹೇಳಿರುವುದಿಲ್ಲ. ಅದೇ ರೀತಿ ನನ್ನ ಗಂಡನೂ ಹೇಳಿರುವುದಿಲ್ಲ. ಕಾರಿಡಾರಿನಲ್ಲಿ ಸಹಿ ಮಾಡಿದ ಬಗ್ಗೆ ಬೇರೆ ಯಾರೂ ಸಹ ದೂರನ್ನು ನೀಡಿರುವುದಿಲ್ಲ.

23. ನಿ.ಪಿ.3 ನ್ಯಾಯಾಲಯದಲ್ಲಿ ಆದಂತಹ ರಾಜಿ ಡಿಕ್ರಿ ಎಂದರೆ ಸರಿ. ರಾಜಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ ಕಾರಣ ನಾನು ಅಲ್ಲಿ ಇರಲಿಲ್ಲ. ಆ ದಿನ ಅರ್ಜಿದಾರರು ಮತ್ತು ಎದುರುದಾರರು ಎಲ್ಲರೂ ಇದ್ದರು ಎಂದರೆ ನನಗೆ ಗೊತ್ತಿಲ್ಲ ಕಾರಣ ನಾನು ಅಲ್ಲಿ ಇರಲಿಲ್ಲ. ಆ ದಿನ ನಾನು ಕಚೇರಿಯಲ್ಲಿದ್ದೆ. ಆ ದಿನ ಎಷ್ಟು ಗಂಟೆಗೆ ಎಲ್ಲರೂ ಮನೆ ಬಿಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ನಾನು ಕಚೇರಿ ಮುಗಿಸಿ ಮನೆಗೆ ಹೋಗಿದ್ದೆ. ನಾನು ಮನೆ ಮುಟ್ಟಿದಾಗ ಎಲ್ಲರೂ ಮನೆಯಲ್ಲಿ ಇದ್ದರು. ನಾನು ಮನೆಗೆ ಹೋಗುವಾಗ ರಾತ್ರಿ 9.30 ಯಿಂದ 10.00 ಗಂಟೆಯಾಗಿರುತ್ತದೆ.

24. ರಾಜಿ ಅರ್ಜಿಯನ್ನು ಸಲ್ಲಿಸುವ ಮೊದಲು ಐಟಿಎಂನವರು ನನ್ನ ಗಂಡನಿಗೆ ಇ-ಮೇಲ್ ಮುಖಾಂತರ ಕನ್ ಫರ್ಮೇಷನ್ ಸೆಟಲ್ ಮೆಂಟ್ ಮೀಡಿಯೇಷನ್ ಅಗ್ರಿಮೆಂಟ್ ಕಳಿಸಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಈ ಇ-ಮೇಲಿಗೆ ನನ್ನ ಗಂಡ ಒಪ್ಪಿಗೆ ಇ-ಮೇಲನ್ನು ಕಳಿಸಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ರಾಜಿ ಅರ್ಜಿಯನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಸೆಟಲ್ ಮೆಂಟ್ ಮಾಡುವ ಮೊದಲು ಎಲ್ಲಿಯಾದರೂ ಮಾತುಕತೆಗೆ ಕುಳಿತಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ಐಟಿಎಂ ಕಚೇರಿಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕಾಂಪ್ರಮೈಸ್ ಅರ್ಜಿಗೆ ಸಹಿ ಹಾಕಿದ ನಂತರ ಅಲ್ಲಿಂದ ಇಲ್ಲಿಯವರೆಗೂ ಯಾವುದೇ ಪೊಲೀಸ್

ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 2016 ರಲ್ಲಿ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ದೂರನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆ ಪೊಲೀಸ್ ದೂರಿನ ಪ್ರತಿಯನ್ನು ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ಆದರೆ ನಿಶಾನೆಗೊಳಿಸಲ್ಪಟ್ಟ ದಾಖಲೆಗಳಲ್ಲಿ ಆ ಪೊಲೀಸ್ ದೂರು ಇಲ್ಲ ಎಂದರೆ ಸರಿ. ನಾನು ಯಾವುದೇ ದೂರನ್ನು ನೀಡದೇ ಇರುವುದರಿಂದ ಆ ದೂರು ದಾಖಲೆಗಳಲ್ಲಿ ಇಲ್ಲ ಎಂದರೆ ಸರಿಯಲ್ಲ.

25. ರಾಜಿ ಡಿಕ್ರಿಯ ವಿರುದ್ಧ ನಾವು ಯಾವುದೇ ಅಪೀಲನ್ನು ಹಾಕಿರುವುದಿಲ್ಲ. ಅಮಲು ಜಾರಿ ಅರ್ಜಿಯನ್ನು ಎದುರುದಾರರು ಹಾಕಿದ ನಂತರ ನನಗೆ ಆ ಅಮಲು ಜಾರಿಯ ಬಗ್ಗೆ ತಿಳಿದು ಬಂದಿರುತ್ತದೆ. ಆ ಅಮಲು ಜಾರಿ ಅರ್ಜಿ 193/2013 ದಿನಾಂಕ 15.07.2015 ರಂದು ಮುಕ್ತಾಯಗೊಂಡಿದೆ ಎಂದರೆ ನನಗೆ ಅದು ಮುಕ್ತಾಯಗೊಂಡ ನಂತರವೇ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಅಮಲು ಜಾರಿ ಅರ್ಜಿಯ ತಪಸೀಲು ಮತ್ತು ಈ ಅರ್ಜಿಯ ತಪಸೀಲು ಒಂದೇ ಎಂದರೆ ಸರಿಯಲ್ಲ. ಅಮಲು ಜಾರಿ ಅರ್ಜಿಯಲ್ಲಿ ಕೆ.ಎಸ್.ಎಫ್.ಸಿ, ಐಟಿಎಂ ಮತ್ತು ಮೂರನೇ ಪಕ್ಷಗಾರರು ಇದ್ದರು. ಅಮಲು ಜಾರಿ ಅರ್ಜಿಯ ತಪಸೀಲು ನಮ್ಮ ಜಾಗ ಎಂದರೆ ಸರ್ವೇ ನಂ.81/2 ಇ ಯಲ್ಲಿ ಇತ್ತು. ಈ ಅಮಲು ಜಾರಿ ಅರ್ಜಿಯಲ್ಲಿ ವಿವೇಕ ರೆಡ್ಡಿ, ನಾಗರಾಜು, ಹೇಮಚಂದ್ರ ಮತ್ತು ಜಯಲಕ್ಷ್ಮಿಯವರು ಪಕ್ಷಗಾರರಾಗಿದ್ದರು ಎಂದರೆ ಸರಿ. ಅದು ನನಗೆ ನಂತರ ತಿಳಿದು

ಬಂದಿರುತ್ತದೆ. ಅಲ್ಲಿ ಅವರು ತಕರಾರನ್ನು ಸಲ್ಲಿಸಿದ್ದು ಅದು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಅಮಲು ಜಾರಿ ಅರ್ಜಿಯು ಐಟಿಎಂ ಅವರ ಪರವಾಗಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

26. 1991 ರಿಂದ 2025 ರವರೆಗಿನ ಯಾವ ವಿಚಾರವೂ ನನಗೆ ಗೊತ್ತಿಲ್ಲ ನನಗೆ ವಿಚಾರ ಗೊತ್ತಿಲ್ಲದಿದ್ದರೂ ಸಹ ಹೇಮಚಂದ್ರರವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಮಚಂದ್ರರವರ ನಾನು ಈ ಅರ್ಜಿಯನ್ನು 7 ವರ್ಷದ ವಿಳಂಬದ ನಂತರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

27. ನರಸಪ್ಪ ರೆಡ್ಡಿಯವರು ಮೇ 2022 ರಲ್ಲಿ ಮೃತಪಟ್ಟಿರುತ್ತಾರೆ. ಅವರು ಸಾಯುವುದಕ್ಕಿಂತ ಮೊದಲು ಯಾವುದೇ ದೂರನ್ನಾಗಲೀ ದಾವೆಯನ್ನಾಗಲೀ ಹೂಡಿಲ್ಲ ಎಂದರೆ ಸರಿ. ಜಯಲಕ್ಷ್ಮಿಯವರು, ವಿವೇಕ ರೆಡ್ಡಿ, ನಾಗರಾಜು ಮತ್ತು ನೀಲಮ್ಮರವರು ಯಾವುದಾದರೂ ಪೊಲೀಸ್ ದೂರನ್ನಾಗಲೀ ಡಿಕ್ರಿಯ ಬಗ್ಗೆ ದಾವೆಯನ್ನಾಗಲೀ ಹೂಡಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**